ಕೆಎಚ್ಎಫ್‌ದು 78 ಕೋಟಿ ರೂಪಾಯಿಗಳ ಯೋಜನೆ ನಬಾರ್ಡ್‌ಗೆ ಕಳಿಸಿದ್ದೇವು. ಕೆಎಚ್ಎಫ್‌ಗೆ ಚುನಾಯಿತ ಪ್ರತಿನಿಧಿಗಳು ಬಂದಿದ್ದಾರೆ. ಆ ಯೋಜನೆ ಯಾವ ಹಂತದಲ್ಲಿದೆ ಎಂದು ತಿಳಿಸಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ಇದು ತೋಟಗಾರಿಕೆಗೆ ಸಂಬಂಧಿಸಿದ್ದುದು. ತಾವೇನು ಪ್ರಸ್ತಾವನೆ ಕಳಿಸಿದ್ದಿರಿ ಅದನ್ನು ನಬಾರ್ಡ್ ಈಗಾಗಲೇ ಒಪ್ಪಿಕೊಂಡಿದೆ ಫೈನಾನ್ಸ್ ಮಾಡಲು ನಾವು ತಯಾರಿದ್ದೇವೆ ಎಂದು ಅದರ ಬೇರೆ ಕೆಲವು ಕಂಡೀಶನ್ಸ್, ಎಲ್ಲಿ ಹೇಗೆ ಮಾಡುತ್ತೀರಿ ಎಂದು ಡೀಟೈಲ್ಸ್ ಕೇಳಿದ್ದಾರೆ. ಅದನ್ನು ಅವರಿಗೆ ಒದಗಿಸಿದ್ದೇವೆ. ಅದೆಲ್ಲಾ ಆದ ಕೂಡಲೇ ತಾವೇನು ಯೋಜನೆ ಹಾಕಿದ್ದಿರಿ ಅದನ್ನು ನಾವು ಪೂರ್ಣಗೊಳಿಸುತ್ತೇವೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು : ಅಧ್ಯಕ್ಷರೇ ಉತ್ತರದಲ್ಲಿ 15 ಜಿಲ್ಲಾಮಟ್ಟದ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ ಎಂದಿದ್ದಾರೆ. ಅದರಲ್ಲಿ ಬಿಜಾಪುರವನ್ನೂ ಸೇರಿಸಿದ್ದಾರೆ. ಬಿಜಾಪುರದಲ್ಲಿ ನಾನೂ ಒಬ್ಬ ತೋಟಗಾರಿಕೆ ಬೆಳೆ ಬೆಳೆಯುವ ರೈತನಾಗಿದ್ದು ಬಿಜಾಪುರದಲ್ಲಿ ಎಲ್ಲಿ ಹಾಪ್‌ಕಾಮ್ಸ್ ಮಳಿಗೆ ಕೆಲಸ ಮಾಡುತ್ತಿದೆ ಎಂದು ನನಗೂ ಗೊತ್ತಿಲ್ಲ. ಅದು ಕೆಲಸ ಮಾಡುತ್ತಿದೆಯೋ ಅಥವಾ ನಿಮಿತ್ತ ಮಾತ್ರಕ್ಕೆ ಆ ಹೆಸರಿದೆಯೋ ಎಂದು ಸಚಿವರಿಂದ ವಿತರಣೆ ಕೇಳುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ : ಅಧ್ಯಕ್ಷರೇ, ಹಾಪ್‌ಕಾಮ್ಸ್‌ನ ಮೂಲ ಉದ್ದೇಶ ರೈತರಿಗೆ ಯೋಗ್ಯ ಮಾರುಕಟ್ಟೆ ಒದಗಿಸಿಕೊಡುವುದು, ಜಿಲ್ಲಾ ಮಟ್ಟದ ತೋಟಗಾರಿಕೆ ಮಾರುಕಟ್ಟೆ ರೈತರಿಗೆ ಸೀಮಿತ ಪ್ರಮಾಣದಲ್ಲಿರುತ್ತದೆ ಆದ್ದರಿಂದ ಹಾಪ್‌ಕಾಮ್ಸ್ ಮೂಲಕ ರೈತರಿಗೆ ವ್ಯವಸ್ಥೆ ಮಾಡಬೇಕು ಎಂಬ ಘನವಾದ ಉದ್ದೇಶದಿಂದ ಕರ್ನಾಟಕ ಹಾರ್ಟಿಕಲ್ಚರ್ ಫೆಡರೇಶನ್ ಪ್ರಾರಂಭವಾಗಿದೆ. ಅದಿನ್ನೂ ಶೈಶವಾವಸ್ಥೆಯಲ್ಲೇ ಇದೆ. ಹಾಲಿ ಹಾಪ್‌ಕಾಮ್ಸ್ ಶೇಕಡ 10 ರಷ್ಟು ರೈತರ ಉತ್ಪನ್ನ ಕೊಳ್ಳುವ ಶಕ್ತಿ ಪಡೆದಿದೆ. ಆದ್ದರಿಂದ ರೈತರಿಗೆ ವಿಸ್ತೃತ ಮಾರುಕಟ್ಟೆಯನ್ನು, ಯೋಗ್ಯ ಬೆಲೆಯನ್ನು ದೊರಕಿಸಿಕೊಡುವ ಕಾರ್ಯಕ್ರಮವನ್ನು ಮಂತ್ರಿಗಳು ರೂಪಿಸುತ್ತಾರೆಯೇ ಎಂದು ನಾನು ಕೇಳುತ್ತೇನೆ ಹಾಗೂ ಕಾಲಮಿತಿಯೊಳಗೆ ಅದನ್ನು ಮಾಡುತ್ತಾರೆಯೇ?

ಶ್ರೀ ಅಲ್ಲಂ ವೀರಭದ್ರಪ್ಪ : ಬಹಳ ಜಿಲ್ಲೆಗಳಲ್ಲಿ ಡಿಸ್ಟ್ರಿಕ್ಟ್ ಹಾರ್ಟಿಕಲ್ಚರ್ ಸೊಸೈಟಿ ಎಂದು ಇವೆ. ಮೊದಲಿನಿಂದ ನಡೆದುಬಂದಂತೆ ಇವು ಡಿಸ್ಟ್ರಿಕ್ಟ್ ಹಾರ್ಟಿಕಲ್ಚರ್ ಆಫೀಸಿನಲ್ಲೇ ಇರುತ್ತವೆ. ಅಲ್ಲೇ ಒಂದು ಸಣ್ಣ ಶೆಡ್‌ನಲ್ಲಿ ಮಾಡುತ್ತವೆ. ಬೇರೆ ಜಿಲ್ಲೆಗಳಲ್ಲಿ ಹಾಪ್‌ಕಾಮ್ಸ್ ನೇರವಾಗಿ ರೈತರಿಗೆ ಯಾವ ತರಹದ ಸಹಾಯವನ್ನೂ ಮಾಡುತ್ತಿಲ್ಲ. ಮುಂದಿನ ದಿನಗಳಲ್ಲಿ ಪ್ರತಿ ಜಿಲ್ಲೆಯಲ್ಲಿ ಹಾಪ್‌ಕಾಮ್ಸ್ ಮಾದರಿ ವ್ಯವಸ್ಥೆ ಮಾಡಬೇಕೆಂಬುದು ಸರ್ಕಾರದ ಉದ್ದೇಶ ಇದೆ. ಜಿಲ್ಲಾ ತೋಟಗಾರಿಕಾ ಸಂಘದ ಮೂಲಕ ಆದರೂ ಆಗಬಹುದು ಅಥವಾ ಅವರಾಗೇ ಮುಂದೆಬಂದು ಹಾಪ್‌ಕಾಮ್ಸ್ ಜೊತೆ ಮಾಡುತ್ತೇವೆ ಎಂದರೂ ನಾವು ಸಿದ್ಧರಿದ್ದೇವೆ. ಅಥವಾ ಕೆಎಚ್ಎಫ್ ಮೂಲಕ ಮಾಡಬೇಕೆಂದರೂ ಆದಕ್ಕೂ ಸಿದ್ದವಿದ್ದೇವೆ. ಎಲ್ಲಿ ಬೆಳೆಯುವ ರೈತರ ಜೊತೆ ಕುಳಿತು ಮಾತನಾಡಿ ಅವರಿಗೆ ಅನುಕೂಲಕರ ವ್ಯವಸ್ಥೆ ಮಾಡಲು ಸರ್ಕಾರ ಸಿದ್ಧವಿದೆ.

**ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆಯ ಪುತ್ತೂರು ತಾಲ್ಲೂಕಿನಲ್ಲಿ ಹಲವಾರು ಹುದ್ದೆಗಳು ಖಾಲಿ ಇರುವ ಬಗ್ಗೆ**

137 (1449) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ತಾಲ್ಲೂಕಿನಲ್ಲಿ ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಹಲವಾರು ಹುದ್ದೆಗಳು ಖಾಲಿ ಇರುವುದು ಕಾರ್ಯಕ್ರಮ ಅನುಷ್ಠಾನಕ್ಕೆ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಖಾಲಿ ಇರುವ ಹುದ್ದೆಗಳೆಷ್ಟು? ಯಾವಾಗ ಭರ್ತಿ ಮಾಡಲಾಗುವುದು?

ಆ) ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ನಿಲುವೇನು? ಗೌರವಧನವನ್ನು ಹೆಚ್ಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಇದ್ದರೆ ಎಷ್ಟು?

ಶ್ರೀಮತಿ ಮೋಟಮ್ಮ (ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಬಂದಿದೆ, ಒಟ್ಟು 22 ಹುದ್ದೆಗಳು ಖಾಲಿ ಇವೆ. ವಿವರಗಳು:

| | ಮಂಜೂರಾತಿ | ಭರ್ತಿ | ಖಾಲಿ |
|---|---|---|---|
| 1) ಬಾಲವಿಕಾಸ ಯೋಜನಾ ಅಧಿಕಾರಿ | 01 | 01 | - |
| 2) ಸಹಾಯಕ ಬಾಲವಿಕಾಸ ಯೋಜನಾ ಅಧಿಕಾರಿ | 05 | 04 | 1 |
| 3) ಮೇಲ್ವಿಚಾರಕಿಯರು | 19 | 07 | 12 |
| 4) ಡಿ.ವೈ.ಪಿ.ಸಿ. | 01 | 01 | - |
| 5) ಪ್ರಥಮದರ್ಜೆ ಸಹಾಯಕರು | 07 | 02 | 05 |
| 6) ಚಾಲಕರು | 06 | 03 | 03 |
| 7) ಚಾಲಕರು | 03 | 02 | 01 |
| **ಒಟ್ಟು** | **42** | **20** | **22** |

ಮೇಲ್ವಿಚಾರಕಿಯರ ಹುದ್ದೆಗಳನ್ನು ಭರ್ತಿ ಮಾಡುವ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದ್ದು, ಸದ್ಯದಲ್ಲೇ ಭರ್ತಿಮಾಡಲು ಕ್ರಮ ಕೈಗೊಳ್ಳಲಾಗುವುದು. ಉಳಿದಂತಹ ಹುದ್ದೆಗಳನ್ನು ಸಾರ್ವತ್ರಿಕ ವರ್ಗಾವಣೆ: ಬಡ್ತಿ ಸಂದರ್ಭದಲ್ಲಿ ಭರ್ತಿ ಮಾಡಲಾಗುವುದು.

ಆ) ಈ ವಿಷಯವು ಭಾರತ ಸರ್ವೋಚ್ಚ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುವುದರಿಂದ ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂಗೊಳಿಸುವ ವಿಚಾರ ಸದ್ಯಕ್ಕೆ ಪರಿಶೀಲನೆಯಲ್ಲಿ ಇರುವುದಿಲ್ಲ. ಸರ್ಕಾರಿ ಆದೇಶ ದಿನಾಂಕ 1999ರಲ್ಲಿ ರೂ. 150-00ಗಳನ್ನು ಅಂಗನವಾಡಿ ಕಾರ್ಯಕರ್ತೆಯರಿಗೂ ರೂ. 75-00ಗಳನ್ನು ಅಂಗನವಾಡಿ ಸಹಾಯಕಿಯರಿಗೂ ದಿನಾಂಕ 01-06-1999 ರಿಂದ ಜಾರಿಗೆ ಬರುವಂತೆ ಗೌರವಧನವನ್ನು ಹೆಚ್ಚಿಸಲಾಗಿದೆ.

ಶ್ರೀ ಡಿ.ವಿ.ಸದಾನಂದಗೌಡ: ಅಧ್ಯಕ್ಷರೇ ಇದೇ ರೀತಿಯ ಪ್ರಶ್ನೆಗಳನ್ನು ಕಳೆದ ಎರಡು ವರ್ಷಗಳಿಂದಲೂ ನಾನು ಕೇಳುತ್ತಿದ್ದೇನೆ. ಇಂಥದೇ ಉತ್ತರ ಬರುತ್ತಿರುವುದನ್ನು ತಾವು ಗಮನಿಸಿರಬಹುದು. ಮಹಿಳೆ ಮಕ್ಕಳ ಬಗ್ಗೆ ಯಾವುದು ಅತ್ಯಂತ ಮುಖ್ಯ ಕಾರ್ಯಕ್ರಮವೋ, ಅದು ಕೇಂದ್ರ ಸರ್ಕಾರದ ಯೋಜನೆ, ರಾಜ್ಯದ ಮೂಲಕ ಅನುಷ್ಠಾನವಾಗುವುದು, ಇದರ ಕಾರ್ಯವೈಖರಿ ನೋಡಿದರೆ ಈ ಇಲಾಖೆ ಹೇಗೆ ಕೆಲಸ ಮಾಡುತ್ತಿದೆ ಎಂದು ನಮಗೆ ಗೊತ್ತಾಗುತ್ತದೆ. ಮೇಲ್ವಿಚಾರಕಿಯರು 19 ಮಂದಿ ಬೇಕಾಗಿದೆ 7ಮಂದಿ ಇದ್ದಾರೆ, 12 ಹುದ್ದೆಗಳು ಎರಡು ವರ್ಷಗಳಿಂದ ಖಾಲಿ ಇವೆ. ಹೇಗೆ ಕೆಲಸಗಳು ಈಡೇರಲಿಕ್ಕೆ ಸಾಧ್ಯ? ಇದನ್ನು ಸಚಿವರು ಹೇಳಬೇಕು. ಎರಡನೆಯದಾಗಿ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದ್ದು ಸದ್ಯದಲ್ಲೇ ಭರ್ತಿ ಮಾಡಲಾಗುವುದು ಎಂದಿದ್ದೀರಿ. ಕಳೆದ ಬಾರಿ ಕೂಡ ಆದಷ್ಟು ಶೀಘ್ರವಾಗಿ ಭರ್ತಿ ಮಾಡುತ್ತೇವೆ ಎಂದು ಹೇಳಿದ್ದಿರಿ. ಈ ಪ್ರಕ್ರಿಯೆ ಈಗ ಯಾವ ಹಂತದಲ್ಲಿದೆ ? ಎಷ್ಟು ಸಮಯದೊಳಗೆ ಮೇಲ್ವಿಚಾರಕಿಯರನ್ನು ಭರ್ತಿಮಾಡುತ್ತೀರಾ ?

ಶ್ರೀಮತಿ ಮೋಟಮ್ಮ : ಅಧ್ಯಕ್ಷರೇ, ಸದಾನಂದಗೌಡರು ಇದೇ ಉತ್ತರವನ್ನು ಎರಡು ವರ್ಷಗಳಿಂದ ಕೇಳುತ್ತಿದ್ದೇವೆ ಎಂದರು, ಅದಕ್ಕೆ ನಾನು ಜವಾಬ್ದಾರಳಲ್ಲ. ಆದರೆ ಈ ಖಾತೆಯನ್ನು ವಹಿಸಿಕೊಂಡ ಮೇಲೆ ಅದನ್ನು ಪುನಶ್ಚೇತನಗೊಳಿಸಿ ಐಸಿಡಿಎಸ್ ಕಾರ್ಯಕ್ರಮವನ್ನು ಸರಿಯಾಗಿ ನಾವು ಜಾರಿಗೊಳಿಸಬೇಕೆಂಬ ದೃಷ್ಟಿಯಿಂದ ಸಾಕಷ್ಟು ವಿಚಾರ ವಿಮರ್ಶೆ ಮಾಡಿ ಮೇಲ್ವಿಚಾರಕಿಯರ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲು ತೀರ್ಮಾನ ತೆಗೆದುಕೊಂಡಿದ್ದೇವೆ ? ನಿಜ ಹೇಳಬೇಕು ಎಂದರೆ ಮೇಲ್ವಿಚಾರಕಿಯರ ಹುದ್ದೆ ಭರ್ತಿಮಾಡಲು ಹಿಂದೆ ತೀರ್ಮಾನಮಾಗಿದ್ದರೂ ಆರ್ಥಿಕ ಇಲಾಖೆಯ ಒಪ್ಪಿಗೆ ದೊರೆತಿರಲಿಲ್ಲ. ಹೊಸ ಸರ್ಕಾರ ಬಂದು ನಾನು ಖಾತೆ ವಹಿಸಿಕೊಂಡ ಮೇಲೆ ಹಣಕಾಸಿನ ಇಲಾಖೆ ಜೊತೆ ಚರ್ಚಿಸಿ ಈಗ ಅವರು ಅನುಮತಿ ಕೊಟ್ಟಿದ್ದಾರೆ. ಈಗ ಯಾವ ರೀತಿ ಆಯ್ಕೆ ಮಾಡಬೇಕೆಂದು ಪ್ರೋಸೆಸ್ ಮಾಡುತ್ತಿದ್ದೇವೆ. ಆದ್ದರಿಂದ ಎರಡು ಮೂರು ತಿಂಗಳೊಳಗೆ ಈ ಪ್ರಕ್ರಿಯೆ ಮುಗಿಯುತ್ತದೆ ನಂತರ ಈ ಹುದ್ದೆಗಳಿಗೆ ಭರ್ತಿ ಮಾಡುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ : ಇನ್ನೊಂದಿದೆ. ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂ ಗೊಳಿಸುವಲ್ಲಿ ರಾಜ್ಯ ಸರ್ಕಾರದ ನಿಲುವೇನು ಎಂದು ನಾನು ಕೇಳಿದ್ದೇನೆ. ಇಡೀ ರಾಜ್ಯಕ್ಕೆ ಸಂಬಂಧಿಸಿದ್ದು ಇದು. ಆದರೆ ಅವರು ಅದು ಸುಪ್ರೀಂಕೋರ್ಟಿನಲ್ಲಿದೆ, ಆದ್ದರಿಂದ ನಾನು ಏನೂ ಹೇಳಲಿಕ್ಕಾಗುವುದಿಲ್ಲ ಎಂದಿದ್ದಾರೆ. ಸರ್ಕಾರದ ನಿಲುವೇನು? ಅವರನ್ನು ಖಾಯಂಗೊಳಿಸುವ ಮನಸ್ಸಿದೆಯೇ? ಅಥವಾ ಖಾಯಂ ಮಾಡುವುದು ಬೇಡ, ಈಗಿರುವುದೇ ಮುಂದುವರೆಯಬೇಕೆಂದಿದೆಯೇ ನಿಮ್ಮ ನಿಲುವೇನು ಹೇಳಿ. ಇವರನ್ನು ಖಾಯಂ ಮಾಡುವ ಇರಾಧೆ ಸ್ವಪ್ಪವಾಗಿ ನಿಮಗಿದೆಯೇ ಇದ್ದರೆ ಸುಪ್ರೀಂಕೋರ್ಟು ತೀರ್ಪು ಬಂದನಂತರ ಅದನ್ನು ಅನುಷ್ಠಾನ ಮಾಡಿತ್ತಿರೋ? 1999ನೇ ಇಸವಿಯಲ್ಲಿ ಹಿಂದಿನ ಸರ್ಕಾರದವರು ಇದನ್ನು ಮಾಡಿದರು. ನಿಜವಾಗಿ ಅವರಿಗೆ ನಾವು ಅಭಿನಂದನೆಗಳನ್ನು ಸಲ್ಲಿಸಬೇಕು. ಸುಮಾರು 150 ರೂಪಾಯಿಗಳನ್ನು ಅಂಗನವಾಡಿ ಕಾರ್ಯಕರ್ತೆಯರಿಗೂ, 75 ರೂಪಾಯಿಗಳನ್ನು ಸಹಾಯಕರಿಗೂ ಅವರು ಹೆಚ್ಚು ಮಾಡಿದ್ದಾರೆ. ಬಹುಶಃ ಅದು ಸಾಲದು. ನಮ್ಮ ಡಿಮ್ಯಾಂಡ್ ಅಷ್ಟಲ್ಲ. ಕನಿಷ್ಟ 500 ರೂಪಾಯಿಗಳನ್ನು ಅಂಗನವಾಡಿ ಕಾರ್ಯಕರ್ತೆಯರಿಗೂ ಅವರಿಗೆ ಹೆಚ್ಚಿಸಬೇಕಾಗಿದೆ. ಈಗ ಇರುವುದರ ಜೊತೆಗೆ ಕನಿಷ್ಟ ಅಷ್ಟನ್ನೂ ಹೆಚ್ಚು ಮಾಡಬೇಕು. ಏಕೆಂದರೆ ನಿಮಗೆ ಗೊತ್ತಿದ್ದೆ-ಇವತ್ತಿನ ಪರಿಸ್ಥಿತಿಯೇನು ಎಂದು. ಸಾಧಾರಣವಾಗಿ ಅಂಗನವಾಡಿ ಕಾರ್ಯಕರ್ತೆಯರ ಪರಿಸ್ಥಿತಿಯೇನು ಎಂದು ಗೊತ್ತಿದೆ. ಒಂದು

ಅಂಗಡಿಗೆ ಹೋಗಿ ಒಂದು ಸೀರೆ, ಒಂದು ರವಿಕೆ ಪಡೆದುಕೊಳ್ಳಬೇಕಾದರೆ ಬಹುಶಃ ಒಂದು ತಿಂಗಳ ಸಂಬಳವೂ ಅವರಿಗೆ ಸಾಕಾಗುವುದಿಲ್ಲ. ಈ ಪರಿಸ್ಥಿತಿಯಲ್ಲಿ ಅವರು ಇದ್ದಾರೆ. ಆದಕಾರಣ ಕನಿಷ್ಟ 500 ರೂಪಾಯಿಗಳನ್ನು ಅಂಗನವಾಡಿ ಕಾರ್ಯಕರ್ತೆಯರಿಗೂ ಮತ್ತು 250 ರೂಪಾಯಿಗಳನ್ನು ಸಹಾಯಕರಿಗೂ ಈಗ ಇರುವುದಕ್ಕಿಂತ ಹೆಚ್ಚು ಮಾಡುವ ಹಾಗೆ ಕೆಲಸಗಳನ್ನು ಮಾಡಬೇಕು ಎಂದು ಒತ್ತಾಯವನ್ನು ಮಾಡುತ್ತೇನೆ. ಇದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು? ನೀವು ಅವರನ್ನು ಖಾಯಂ ಮಾಡಬೇಕು ಎಂದು ಹೇಳುವ ಮನಸ್ಸು ನಿಮ್ಮಲ್ಲಿದೆಯೇ?

ಶ್ರೀ ಮತಿ ಮೋಟಮ್ಮ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಾನಂದಗೌಡರಿಗೆ ಚೆನ್ನಾಗಿ ಗೊತ್ತು. ಈ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಇದು ರಾಜ್ಯಸರ್ಕಾರದ ಒಂದು ಯೋಜನೆಯಲ್ಲ. ಅದು ಕೇಂದ್ರ ಸರ್ಕಾರದ ಯೋಜನೆ. ಅದನ್ನು ನಾವು ಜಾರಿಗೊಳಿಸುತ್ತಿದ್ದೇವೆ ಎಂದು ಹೇಳಿ ಗೊತ್ತಿದೆ. ಕೇಂದ್ರ ಸರ್ಕಾರದವರು ಮಾಡುವ ಕೆಲಸವನ್ನು ರಾಜ್ಯ ಸರ್ಕಾರದವರು ನೀವು ಮಾಡಿ ಎಂದು ಹೇಳಿ ಒತ್ತಡ ತಂದರೆ ಹೇಗೆ? ಆದರೆ ನಾವು ಕೇಂದ್ರ ಸರ್ಕಾರಕ್ಕೆ ಒತ್ತಡವನ್ನು ತರುತ್ತಿದ್ದೇವೆ. ಮೊನ್ನೆ ವಿಧಾನಪರಿಷತ್ತಿನಲ್ಲಿ ಈ ಪ್ರಶ್ನೆ ಬಂದಾಗ ನಾನು ಹೇಳಿದೆ. ಫೆಬ್ರವರಿ ತಿಂಗಳಲ್ಲಿ ನಮ್ಮ ಇಲಾಖೆಯ ಮಂತ್ರಿಗಳ ಒಂದು ಸಮ್ಮೇಳನ ಏನು ಬೆಹಲಿಯಲ್ಲಿ ನಡೆಯಿತು. ಆ ಸಭೆಯಲ್ಲಿ ಭಾಗವಹಿಸಿದ್ದಾಗ ನಾನು ಒತ್ತಾಯ ಮಾಡಿದ್ದೇನೆ. ಈ ಯೋಜನೆ ಮಂಜೂರಾಗಿ 25 ವರ್ಷಗಳಾಯಿತು. ನಮ್ಮ ರಾಜ್ಯದಲ್ಲೇ 40 ಸಾವಿರ ಜನ ಅಂಗನವಾಡಿ ಕೆಲಸಗಾರ್ತಿಯರು ಮತ್ತು ಸಹಾಯಕಿಯರು ಇದ್ದಾರೆ. 25 ವರ್ಷಗಳಾಗಿರುವುದರಿಂದ ಕೇಂದ್ರಸರ್ಕಾರದವರು ಸಿಲ್ವರ್ ಜೂಬಿಲಿ ಇಯರ್ ಎಂದುಘೋಷಣೆ ಮಾಡಿ ಅಟ್‌ಲೀಸ್ಟ್ ಅವರಿಗೆ 2 ಸಾವಿರ ರೂಪಾಯಿಗಳ ಕನ್‌ಸಾಲಿಡೇಟೆಡ್ ಸ್ಯಾಲರಿಯನ್ನು ಘೋಷಣೆ ಮಾಡಬೇಕು, ಅದೇ ರೀತಿ ಸಹಾಯಕರಿಗೆ 1 ಸಾವಿರರೂಪಾಯಿಗಳನ್ನು ಘೋಷಣೆ ಮಾಡಬೇಕು ಎಂದುಹೇಳಿ ನಮ್ಮ ಒಂದು ಸಮ್ಮೇಳನದಲ್ಲಿ ನಾನು ಒತ್ತಾಯ ಮಾಡಿದ್ದೇನೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಾವೇನು ಸೌತ್ ಇಂಡಿಯನ್ ಮಿನಿಸ್ಟರ್ಸ್ ಇದ್ದೇವೆ. ನಾವೆಲ್ಲಾ ಪ್ರಧಾನಮಂತ್ರಿಯವರ ಹತ್ತಿರ ಹೋಗಿ ಮಾತುಕತೆ ಮಾಡಬೇಕು, ಅವರಿಗೆ ಒತ್ತಾಯ ಮಾಡಬೇಕೆಂದು ಹೇಳಿ ನಾವು ನಿಯೋಗ ಹೊರಟಿದ್ದೇವೆ ಆದರೆ ಅವರು ಅವತ್ತು ಕೇಂದ್ರದಲ್ಲಿ ಇರಲಿಲ್ಲ. ಈ ರೀತಿ ಒತ್ತಾಯ ಮಾಡಿದ್ದೇವೆ ಏನಾದರೂ ರಾಜ್ಯ ಸರ್ಕಾರವೇ ಮಾಡುವ ಕೆಲಸವಾಗಿದ್ದರೆ ಖಂಡಿತವಾಗಿಯೂ ನಾವು ಅದನ್ನು ಮಾಡುತ್ತಿದ್ದೆವು. ನೀವು ಮಾಡುವ ಕೆಲಸವನ್ನು ಈಗ ನನ್ನನ್ನು ಮಾಡು ಎಂದರೆ ಸಾಧ್ಯವಾಗುವುದಿಲ್ಲ. ಪರಿಸ್ಥಿತಿ ಆ ರೀತಿ ಇದೆ. ಆದರೆ ಅವರ ಬಗ್ಗೆ ಕಳಕಳಿ ಇದೆ.

ಶ್ರೀ ಡಿ. ವಿ. ಸದಾನಂದಗೌಡ : ನಿಮ್ಮ ನಿಲುವೇನು ? ಅವರನ್ನು ಖಾಯಂ ಮಾಡುವ ಬಗ್ಗೆ ನಿಮ್ಮ ಸರ್ಕಾರದ ನಿಲುವೇನು?

ಶ್ರೀ ಮತಿ ಮೋಟಮ್ಮ : ನಮಗೆ ಆಪರ್ಚುನಿಟಿ ಇಲ್ಲವಲ್ಲ. ಇದು ಕೇಂದ್ರ ಸರ್ಕಾರದ ಜವಾಬ್ದಾರಿ. ನೀವೆಲ್ಲರೂ ಇಷ್ಟೊಂದು ಕಳಕಳಿಯನ್ನು ವಹಿಸಿದರೆ ಅಂಗನವಾಡಿ ಅಸೋಸಿಯೇಷನ್‌ನವರು ಏನು ಇದ್ದಾರೆ, ಅವರ ಜೊತೆ ನಾವು ನಿಯೋಗ ಹೋಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ಹಾಕೋಣ. ಅದರಲ್ಲಿ ಏನೂ ಇಲ್ಲ. ನಮಗೆ ಕಳಕಳಿ ಇಲ್ಲ ಎನ್ನುವ ಪ್ರಶ್ನೆ ಅಲ್ಲ. ನಿಜ ಹೇಳಬೇಕೆಂದರೆ ಕೇಂದ್ರ ಸರ್ಕಾರದಲ್ಲಿ ನಿಮ್ಮದೇ ಆದ ಸರ್ಕಾರವಿದೆ. ನಿಮ್ಮ ಮಂತ್ರಿಗಳಿದ್ದಾರೆ. ಪಾರ್ಲಿಮೆಂಟ್ ಸದಸ್ಯರುಗಳಿದ್ದಾರೆ. ಅವರ ಮೂಲಕ ಹೋಗಿ ಒತ್ತಾಯವನ್ನು ಮಾಡೋಣ. ನಾನು ಬೇಕಾದರೆ ಆ ಡೆಲಿಗೇಷನ್‌ನ್ನು ಲೀಡ್ ಮಾಡುತ್ತೇನೆ. ಆದರೆ ನೀವೆಲ್ಲರೂ ಆರ್ಗನೈಜ್ ಮಾಡಿ.

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನನಗೆ ಒಂದು ಅನುಮಾನವೆಂದರೆ ಪುತ್ತೂರು ಒಂದೇ ತಾಲ್ಲೂಕಿನಲ್ಲಿ 22 ಹುದ್ದೆಗಳು ಖಾಲಿ ಇವೆ. ಇಡೀ ರಾಜ್ಯದಲ್ಲಿ ಸಾವಿರಾರು ಹುದ್ದೆಗಳು ಖಾಲಿ ಇವೆ. ಅವರು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನ ಒಪ್ಪಿಗೆ ಪಡೆದಿದ್ದೇನೆ, ಮಾಡುತ್ತೇನೆ ಎಂದು ಮಂತ್ರಿಗಳು ಹೇಳುತ್ತಿದ್ದಾರೆ. ಆದರೆ ಮೊನ್ನೆ ದಿನ ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಹೇಳಿದ್ದಾರೆ. 80 ಸಾವಿರ ಹುದ್ದೆಗಳು ಖಾಲಿ ಇವೆ. ಅದರಲ್ಲಿ 20 ಸಾವಿರ ಹುದ್ದೆಗಳನ್ನು ಇಟ್ಟುಕೊಂಡು ಮಿಕ್ಕಿದ್ದೆಲ್ಲವನ್ನೂ ರದ್ದುಮಾಡುತ್ತೇನೆಂದು ಹೇಳಿದ್ದಾರೆ. ಆ ರೀತಿ ರದ್ದು ಮಾಡುವುದರಲ್ಲಿ ಇದೂ ಕೂಡ ಸೇರುತ್ತದೆಯೇ? ಏಕೆಂದರೆ ಸರ್ಕಾರದ ವಿವಿಧ ಕಾರ್ಯಕ್ರಮಗಳನ್ನು ಜಾರಿ ಮಾಡುವುದಕ್ಕೆ ಅಂಗನವಾಡಿ ಕಾರ್ಯಕರ್ತೆಯರನ್ನು ಸಾಕಷ್ಟು ಬಳಕೆ ಮಾಡುತ್ತಿದ್ದೇವೆ. ಕೋಳಿ ಲೆಕ್ಕದಿಂದ ಹಿಡಿದು ಎಲ್ಲವನ್ನೂ ಅವರ ಹತ್ತಿರವೇ ಮಾಡಿಸುವುದು. ಅವರಿಗೆ ನಾವು ಕೊಡುವುದು 400 ರೂಪಾಯಿಗಳು. ಕೆಲಸ ಮಾತ್ರ ಇಡೀ ದಿವಸಕ್ಕಾಗುವಷ್ಟು ಹೊಡುತ್ತಿದ್ದೇವೆ. ಆ ರೀತಿ ಇದ್ದಾಗ ಅವರಿಗೆ ಸಿಬ್ಬಂದಿ ಸಂಪೂರ್ಣವಾಗಿದಿದ್ದರೆ ಸರ್ಕಾರಿ ಕಾರ್ಯಕ್ರಮಗಳು ಸರಿಯಾಗಿ ಅನುಷ್ಠಾನವಾಗುವುದಿಲ್ಲ. ಹಾಗಾಗಿ ಆ ಸಿಬ್ಬಂದಿ ವರ್ಗವನ್ನು ತುಂಬಿಸುವುದಕ್ಕೆ ಇಡೀ ರಾಜ್ಯದಲ್ಲಿ ನಿಮ್ಮ ಪ್ರಯತ್ನ ಇದೆಯೇ? ಅಥವಾ ಮೊನ್ನೆ ಬಜೆಟ್ ಭಾಷಣದಲ್ಲಿ ಹುದ್ದೆಗಳನ್ನು ಕಟ್ ಮಾಡುತ್ತೇವೆಂದು ಹೇಳಿದರಲ್ಲ. ಅದರಲ್ಲಿ ಇದೇನಾದರೂ ಕಟ್ ಆಗುತ್ತದೆಯೇ?

ಶ್ರೀಮತಿ ಮೋಟಮ್ಮ : ಮಾನ್ಯ ಅರಗಜ್ಞಾನೇಂದ್ರರವರಿಗೆ ಅಂಗನವಾಡಿ ಕಾರ್ಯಕರ್ತರಿಗೆಎಷ್ಟು ಸಂಬಳ ದೊರೆಯುತ್ತಿದೆ ಎನ್ನುವುದೇ ಗೊತ್ತಿಲ್ಲ. ಅವರಿಗೆ ದೊರೆಯುತ್ತಿರುವುದು 400 ರೂಪಾಯಿಗಳಲ್ಲ. ಈಗ ಅವರಿಗೆ ಒಟ್ಟು ಸಿಗುತ್ತಿರುವುದು 750 ರೂಪಾಯಿಗಳು ಸುತ್ತ ಮಾನ್ಯ ಸದಾನಂದಗೌಡರು ಒಂದು ಮಾತನ್ನು ಹೇಳಿದರು. ಹಿಂದಿನ ಸರ್ಕಾರದವರು ಅವರಿಗೆ ಗೌರವಧನವನ್ನು ಹೆಚ್ಚಿಸಿದ್ದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ ಎಂದು. ಅವರು ಸುಮ್ಮನೆ ಘೋಷಣೆ ಮಾಡಿದ್ದು. ಆದರೆ ಅವರು ಹಣವನ್ನು ಇಟ್ಟಿರಲಿಲ್ಲ. ನಿಜಹೇಳಬೇಕೆಂದರೆ ನಾವು ಹೊಸ ಸರ್ಕಾರ ಬಂದ ಮೇಲೆ ಅದಕ್ಕೆ ಒಂಭತ್ತೂವರೆ ಕೋಟಿ ರೂಪಾಯಿಗಳ ಮಂಜೂರಾತಿಯನ್ನು ತೆಗೆದುಕೊಂಡ ಅದು ಸಪ್ಲಿಮೆಂಟರಿ ಬಜೆಟ್‌ನಲ್ಲಿ ಪಾಸಾಗಿದೆ. ಆದರಿಂದ ಅವರಿಗೆ 150-100ರೂಪಾಯಿಗಳನ್ನು ಕೊಡಲಿಕ್ಕಾಗಿಲ್ಲ. ಈಗ ಹಣವನ್ನು ಅವರಿಗೆ ಕೊಡುತ್ತಿರುವವರು ನಾವು. ತಾವು ಅಭಿನಂದನೆಯನ್ನು ನಮಗೆ ಹೇಳಬೇಕು.

ಶ್ರೀ ಡಿ.ವಿ.ಸದಾನಂದಗೌಡ : ಸರ್ಕಾರ ಎಂದರೆ ಅದು ಕಂಟಿನ್ಯೂಯಸ್ ಪ್ರೋಸೆಸ್. ನೀವು ಇರಿ. ಇನ್ನೊಬ್ಬರು ಇರಿ. ಇನ್ನೊಬ್ಬರು ಮಾಡಿದ್ದನ್ನು ನೀವು ಅನುಷ್ಠಾನ ಮಾಡುವುದು. ಬರುವ ಸಾರಿ ನೀವು ಅನುಷ್ಠಾನ ಮಾಡಿದ್ದನ್ನು ನಾವೂ ಮಾಡಬಹುದು. ಆ ರೀತಿ ಹೇಳಲಿಕ್ಕಾಗುವುದಿಲ್ಲ. ಹಿಂದಿನ ಸರ್ಕಾರಕ್ಕೆ ಆ ಕೆಲಸವಾಗಬೇಕು ಎಂದು ಏನು ಮನಸ್ಸಿನಲ್ಲಿತ್ತು ಈಗ ಅದನ್ನು ಮಾಡಿದ್ದಾರೆ; ಈಗ ನಾನು ಕೇಳುವುದು ಈಗಾಗಲೇ ಪೇಮೆಂಟ್‌ಗಳಾಗುತ್ತಿದೆ. ನನ್ನ ಉದ್ದೇಶವಿಷ್ಟೇ. ಮಾನ್ಯ ಅರಗ ಜ್ಞಾನೇಂದ್ರರವರು ಕೇಳಿದ ಪ್ರಶ್ನೆಯ ರೀತಿಯಲ್ಲಿ ಈ ಇಲಾಖೆಗೆ ಹುದ್ದೆಗಳು ಯಾವುದೇ ರೀತಿಯಲ್ಲೂ ಕಟ್ ಆಗಬಾರದು. ಏಕೆಂದರೆ ಮೂಲಭೂತ ಸೌಕರ್ಯಕ್ಕೆ ಎಲ್ಲಾ ರೀತಿಯ ಮಹಿಳೆಯರಿಗೆ ಮತ್ತು ಮಕ್ಕಳಿಗೆ ತೊಂದರೆಯಾಗುತ್ತದೆ. ಅದಕಾರಣ ಇದಕ್ಕೆ ಅದನ್ನು ಅನ್ವಯ ಮಾಡಬಾರದು. ಈ ಬಗ್ಗೆ ತಮ್ಮ ನಿಲುವೇನು ಎಂದು ಸ್ಪಷ್ಟೀಕರಣ ಮಾಡಬೇಕು.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಆ ಇಬ್ಬರ ಸದಸ್ಯರ ಕಳಕಳಿಯೂ ನನಗೆ ಅರ್ಥವಾಗುತ್ತದೆ. ನಾವು ಆ ಕಳಕಳಿಯಿಂದ ಯಾವುದೇ ರೀತಿ ಈ ಇಲಾಖೆಯ ಹುದ್ದೆಗಳನ್ನು ಬ್ಯಾನ್ ಮಾಡಲಿಕ್ಕೆ ನಾವು ಬಿಟ್ಟಿಲ್ಲ. ಈಗಾಗಲೇ ಇದರ ಬಗ್ಗೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಕ್ಲಿಯರೆನ್ಸ್‌ನ್ನು ಕೊಟ್ಟಿದ್ದಾರೆಂದರೆ ಅಬಾಲಿಷ್ ಮಾಡುವ ಪ್ರಶ್ನೆ ಎಲ್ಲಿ ಬಂತು. ಅವರಿಂದ ಅದಕ್ಕೂ ಮತ್ತೊಮ್ಮೆ ಅಭಿನಂದಿಸಬೇಕು. ಸ್ವಲ್ಪ ವಿಶಾಲ ಹೃದಯಂಗಳಾಗಿ, ಒಳ್ಳೆಯ ಕೆಲಸ ಮಾಡಿದಾಗ ನೀವು ಅಭಿನಂದಿಸಬೇಕು.

ಶ್ರೀ ಅರಗ ಜ್ಞಾನೇಂದ್ರ : ಅಡ್ವಾನ್ಸ್ ಆಗಿ ಅಭಿನಂದಿಸುವ ಕ್ರಮ ನಮ್ಮ ಹತ್ತಿರ ಇಲ್ಲ.

ಶ್ರೀ ಕೆ. ಪ್ರಭಾಕರ ಬಂಗೇರ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 400 ಕ್ಕಿಂತ ಹೆಚ್ಚು ಬೇಡಿಕೆ ಇದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡುತ್ತಾರೆಯೇ?

ಶ್ರೀಮತಿ ಮೋಟಮ್ಮ : ಇದರಲ್ಲಿ ಒಂದು ವಿಶೇಷತೆ ಎಂದರೆ ಅಂಗನವಾಡಿಗಳನ್ನು ಮಂಜೂರು ಮಾಡುವ ಅಧಿಕಾರವಿಲ್ಲ. ಅದು ಸಂಪೂರ್ಣ ಕೇಂದ್ರ ಸರ್ಕಾರದಿಂದಲೇ ಮಂಜೂರಾಗಿ ಬರಬೇಕು. ಈಗಾಗಲೇ ಎರಡು ವರ್ಷಗಳಿಂದ ಸುಮಾರು 6650 ಅಂಗನವಾಡಿಗಳು ಅಡಿಷನಲ್ ಆಗಿ ಬೇಕು ಎಂದು ನಾವು ಕೇಳಿದ್ದೇವೆ. ಆದರೆ ಮಂಜೂರಾತಿ ಕೊಡಿಸಿಲ್ಲ. ತಾವೆಲ್ಲ ಆ ಕಡೆ ಕುಳಿದ್ದೀರಲ್ಲ, ಜಾಸ್ತಿ ಪ್ರಭಾವ ಬೀರಿ ಅಂಗನವಾಡಿಗಳನ್ನು ಮಂಜೂರು ಮಾಡಲಿಕ್ಕೆ ಮನವೊಲಿಸಿಕೊಡಬೇಕೆಂದು ನಾನು ಅಧ್ಯಕ್ಷರ ಮುಖಾಂತರ ನಿಮ್ಮಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣದಲ್ಲಿ ಅಭಿವೃದ್ಧಿ ಮಂತ್ರಿಗಳು ಬಹಳ ಕ್ರಿಯಾಶೀಲ ಮಂತ್ರಿಗಳು. ನಾನು ಸಲಹೆ ರೂಪದಲ್ಲಿ, ಪ್ರಶ್ನೆಯ ರೂಪದಲ್ಲಿ ಒಂದು ಸಲಹೆಯನ್ನು ಅವರಿಗೆ ಕೊಡುವುದಕ್ಕೆ ಬಯಸುತ್ತೇನೆ. ನಿನ್ನೆ ಮಂಡಿಸಿರುವ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸ್ತ್ರೀಶಕ್ತಿ ಮತ್ತು ಹೆಣ್ಣುಮಕ್ಕಳಿಗೆ ಸಂಬಂಧಪಟ್ಟ ಅನೇಕ ಯೋಜನೆಗಳನ್ನು ಇಂತಿ ಈ ಅಂಗನವಾಡಿ ಜಾಲವನ್ನು ಉಪಯೋಗಿಸಿ ಕೊಳ್ಳುತ್ತೇನೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೊಸ್ಕರ ನನ್ನ ಸಂಹೆ ಪ್ರಶ್ನೆಯ ರೂಪದಲ್ಲಿ ಏನೆಂದರೆ ಸರ್ಕಾರ ಈ ಕಾರ್ಯಕ್ರಮಗಳನ್ನೂ ಸಹಿತ ಅಂಗನವಾಡಿ ಜಾಲವ ಮೂಲಕ ಅನುಷ್ಠಾನಗೊಳಿಸಿಕೊಳ್ಳುವ ದೃಷ್ಟಿಯಿಂದಾಗಿ ಆ ಕಾರ್ಯಕ್ರಮಗಳಲ್ಲಿರುವ ಹಣವನ್ನು ಸ್ವಲ್ಪ ಮಟ್ಟಿಗೆ ಅವರಿಗೂ ಸಹಿತ ಸಂಭಾವನಾ ರೂಪದಲ್ಲಿ ಕೊಡುವುದಕ್ಕೆ ಸಾಧ್ಯವೇನೂ ಎನ್ನುವುದನ್ನು ಪರಿಶೀಲನೆ ಮಾಡುವುದಕ್ಕಾಗುತ್ತದೆಯೇ ಎನ್ನುವುದು ಒಂದು. ಏಕೆಂದರೆ ಸ್ತ್ರೀಶಕ್ತಿ ಕಾರ್ಯಕ್ರಮಕ್ಕೆ 50 ಕೋಟಿ ರೂಪಾಯಿಗಳು ಮತ್ತೊಂದಕ್ಕೆ 18 ಕೋಟಿ ರೂಪಾಯಿಗಳುಹೀಗೆ ಒಟ್ಟು 68 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದಾರೆ. ಆರೂಪದಲ್ಲಿ ಮಾಡುವುದಕ್ಕೆ ಸಾಧ್ಯವೇ ಎನ್ನುವುದು ಒಂದು ಎರಡನೆಯದಾಗಿ, ಕೇಂದ್ರಸರ್ಕಾರ ಅಷ್ಟೇ ಅಲ್ಲ ಅಂಗನವಾಡಿಗಳನ್ನು ನಡೆಸಬಕ್ಕದ್ದು, ಕೆಲವು ಬ್ಲಾಕ್‌ಗಳು ರಾಜ್ಯಸರ್ಕಾರದ್ದು ಸಹಿತ ಇದೆ. ಅದರಿಂದಾಗಿ ಈ ಅಂಗನವಾಡಿ ಕಾರ್ಯಕರ್ತರದ್ದು ನಿರಂತರವಾದ ಸಮಸ್ಯೆ. ಇದನ್ನು ಅಷ್ಟೊಂದು ಸುಲಭವಾಗಿ ನಾವು ನೀವೂ ಸೇರಿ ಕೇಂದ್ರಸರ್ಕಾರದ ಮೇಲೆ ಜವಾಬ್ದಾರಿಯನ್ನು ಹೇರಿ ಮಾಡಲಿಕ್ಕೆ ಸಾಧ್ಯವಿಲ್ಲ, ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಕಡಿಮೆ ಯಾಗಬೇಕು, ಇನ್ನೊಂದು ಕಡೆ ಈ ಪ್ಲಾನಲ್ಲಾ ರೆಡ್ಯೂಸ್ ಮಾಡಬೇಕು ಎಂದು ಹೇಳುವಾಗ ಇದನ್ನೆಲ್ಲಾ ಹೆಚ್ಚು ಮಾಡುವುದು ಅಷ್ಟೊಂದು ಸುಲಭವಲ್ಲ, ಇದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಸಾಧ್ಯವೇ ಎಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳಲು ಬಯಸುತ್ತೇನೆ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಹಿರಿಯರಾದ ಸಿಂಧ್ಯಾರವರು ಸಹಾ ಈ ಖಾತೆಯನ್ನು ಕೆಲವು ದಿನಗಳು ಅವರು ನಿರ್ವಹಿಸಿದ್ದಾರೆ. ಆದ್ದರಿಂದ ಅವರ ಸಲಹೆ ಖಂಡಿತಾ ಒಳ್ಳೆಯದು ಇದ್ದಹಾಗೆ ಕಾಣುತ್ತೆ. ಇದನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆಮಾಡಿ ಯಾವ ರೀತಿ ಅದಕ್ಕೆ ನಾವು ಪರಿಹಾರ ಕಂಡುಹಿಡಿಯಬಹುದು ಎನ್ನುವುದನ್ನು ವಿಚಾರ ಮಾಡುತ್ತೇನೆ.

**ಚಿಕ್ಕನಾಯಕನಹಳ್ಳಿಯಲ್ಲಿ ಸಾಗುವಳಿ ಜಮೀನು ಮಂಜೂರಾತಿ**

138 ( 1383) ಶ್ರೀ ಸುರೇಶಬಾಬು.ಸಿ.ಬಿ(ಚಿಕ್ಕನಾಯಕನಹಳ್ಳಿ) : ಮಾನ್ಯ ಕಂದಾಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಅಕ್ರಮ ಮತ್ತು ಸಕ್ರಮ ಸಮಿತಿಯಲ್ಲಿ ಎಷ್ಟು ಫಲಾನುಭವಿಗಳಿಗೆ ಜಮೀನು ಮಂಜೂರು ಮಾಡಲಾಗಿದೆ: ಅವರಲ್ಲಿ ಎಷ್ಟು ಫಲಾನುಭವಿಗಳಿಗೆ ಸಾಗವಳಿ ಚೀಟಿ ನೀಡಲಾಗಿದೆ.

ಆ) ಎಷ್ಟು ಫಲಾನುಭವಿಗಳಿಗೆ ಖಾತೆ ಮತ್ತು ಪಹಣಿ ಮಾಡಿಕೊಟ್ಟಿದೆ; ಸಾಗುವಳಿಚೀಟಿ ಪಡೆದಿರುವ ಫಲಾನುಭವಿಗಳಲ್ಲಿಎಷ್ಟು ಮಂದಿ ಕಿಮ್ಮತ್ತು ಹಣ ಪಾವತಿ ಮಾಡಿಯುತ್ತಾರೆ ? (ವಿವರವಾದ ಮಾಹಿತಿ ಒದಗಿಸುವುದು)

ಶ್ರೀ ಹೆಚ್.ಸಿ.ಶ್ರೀ ಕಂಠಯ್ಯ (ಕಂದಾಯ ಸಚಿವರು) :

ಅ) 4174 ಫಲಾನುಭವಿಗಳಿಗೆ ಜಮೀನು ಮಂಜೂರು ಮಾಡಲಾಗಿದೆ. 3503 ಫಲಾನುಭವಿಗಳಿಗೆ ಸಾಗುವಳಿ ಚೀಟಿ ನೀಡಲಾಗಿದೆ.

ಆ) 3258 ಫಲಾನುಭವಿಗಳಿಗೆ ಖಾತೆ ಮತ್ತು ಪಹಣಿ ಮಾಡಿಕೊಟ್ಟಿದೆ. 2124 ಫಲಾನುಭವಿಗಳು ಕಿಮ್ಮತ್ತು ಹಣ ಪಾವತಿ ಮಾಡಿರುತ್ತಾರೆ.

ಶ್ರೀ ಸಿ.ಬಿ.ಸುರೇಶ್ ಬಾಬು : ಮಾನ್ಯ ಅಧ್ಯಕ್ಷರೇ, ಈಗ 4174 ಫಲಾನುಭವಿಗಳಿಗೆ ಜಮೀನು ಮಂಜೂರಾಗಿದೆ. ಅದರಲ್ಲಿ ಬರೀ 3503 ಫಲಾನುಭವಿಗಳಿಗೆ ಸಾಗುವಳಿ ಚೀಟಿಯನ್ನು ನೀಡಲಾಗಿದೆ. ಇನ್ನು ಉಳಿದವರಿಗೆ ಏಕೆ ಇಷ್ಟು ದಿವಸವಾದರೂ ಮಾಡಿಲ್ಲ? ಹಾಗೆಯೇ ಇದರಲ್ಲಿ ಇನ್ನು 671 ಮಂದಿಗೆ ಸಾಗುವಳಿ ಚೀಟಿ ಕೊಟ್ಟಿಲ್ಲ. ಅದರ ಜೊತೆಗೆ 3258 ಫಲಾನುಭವಿಗಳಿಗೆ ಖಾತೆ ಪಹಣಿಯನ್ನು ಮಾಡಿಕೊಡಲಾಗಿದೆ ಎಂದು ಹೇಳಿದ್ದಾರೆ. ಇದರಲ್ಲಿ ಕೂಡ ಸ್ವಲ್ಪ ತಾರತಮ್ಯವಿದೆ. ಅದರಲ್ಲಿಇನ್ನೂ 2124 ಜನ ಫಲಾನುಭವಿಗಳಿಗೆ ಕಿಮ್ಮತ್ತನ್ನು ಕಟ್ಟಿಸಿಕೊಂಡು ಖಾತೆ ಪಹಣಿ ಮಾಡಿಕೊಟ್ಟಿದ್ದಾರೆ. ಕೆಲವರಿಗೆ ಹಣವನ್ನು ಕಟ್ಟಿಸಿಕೊಳ್ಳದೆ ಖಾತೆ ಪಹಣಿಯನ್ನು ಮಾಡಿಕೊಟ್ಟಿದ್ದಾರೆ. ಆದರೆ, ಇಲಾಖೆಯವರು ಈ ತಾರತಮ್ಯ ಮಾಡುತ್ತಿದ್ದಾರೆ ಈ ತಾರತಮ್ಯದ ಬಗ್ಗೆ ಮಾನ್ಯ ಕಂದಾಯ ಸಚಿವರು ಗಮನ ಹರಿಸಿದ್ದೀರಾ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

10. 10 ಪಿ.ಎಂ.

ಶ್ರೀ ಎಚ್.ಸಿ. ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೆ, ತಾರತಮ್ಯ ಯಾವ ರೀತಿಯೂ ಮಾಡಿಲ್ಲ. ತಾರತಮ್ಯ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಸರ್ಕಾರದ ಏನು ಕಾನೂನು ಇದೆ, ಆ ಪ್ರಕಾರ ಎಲ್ಲಾ ಫಲಾನುಭವಿಗಳಿಗೂ ಸಹಿತ ನಾವು ಸಾಗುವಳಿ ಚೀಟಿಯನ್ನು ಕೊಟ್ಟಿದ್ದೇವೆ. ಉಳಿಕೆಯವರಿಗೂ ಸಹ ಕೊಡುವುದಕ್ಕೆ ಶೀಘ್ರವಾಗಿ ಏರ್ಪಾಡು ಮಾಡುತ್ತಿದ್ದೇವೆ.